ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಹಾಲೀ ರಾಜ್ಯದಲ್ಲಿ 38,093 ಅಂಗನವಾಡಿ ಕಾರ್ಯಕರ್ತೆಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆ) ರಾಜ್ಯದಲ್ಲಿರುವ ಅಂಗನವಾಡಿಗಳಲ್ಲಿ ಹಾಲೀ 39,007 ಅಂಗನವಾಡಿ ಸಹಾಯಕಿಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಈ ಕೆಳಕಂಡಂತೆ ಮಾಸಿಕ ಗೌರವಧನ ನೀಡಲಾಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆಯರು	ರೂ.
1. ಎಸ್.ಎಸ್.ಎಲ್.ಸಿ. ಅನುತ್ತೀರ್ಣರಾದವರಿಗೆ	350.00
2. ಎಸ್.ಎಸ್.ಎಲ್.ಸಿ. ಅನುತ್ತೀರ್ಣರಾಗಿದ್ದು 5 ವರ್ಷ ಅನುಭವ ಉಳ್ಳವರಿಗೆ	375.00
3. ಎಸ್.ಎಸ್.ಎಲ್.ಸಿ. ಅನುತ್ತೀರ್ಣರಾಗಿದ್ದು 10 ವರ್ಷ ಅನುಭವ ಉಳ್ಳವರಿಗೆ	400.00
4. ಎಸ್.ಎಸ್.ಎಲ್.ಸಿ. ಉತ್ತೀರ್ಣರಾದವರಿಗೆ	400.00
5. ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿ 5 ವರ್ಷ ಅನುಭವ ಉಳ್ಳವರಿಗೆ	425.00
6. ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿ 10 ವರ್ಷ ಅನುಭವ ಉಳ್ಳವರು	450.00
7. ಅಂಗನವಾಡಿ ಸಹಯಕಿಯರಿಗೆ	200.00

ಅಲ್ಲದೇ ರಾಜ್ಯ ಸರ್ಕಾರವು ತನ್ನ ವತಿಯಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಮಾಹೆಯಾನ ರೂ.100.00 ಹಾಗೂ ರೂ.50.00 ಹೆಚ್ಚುವರಿ ಗೌರವಧನವನ್ನು ದಿನಾಂಕ 1.11.1995ರಿಂದ ಪಾವತಿ ಮಾಡುತ್ತಿದೆ.

ಈ) ಕೇಂದ್ರ ಸರ್ಕಾರವು ದಿನಾಂಕ 16.5.1997ರಿಂದ ಅನ್ವಯವಾಗುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ಶೇಕಡ 25ರಷ್ಟು ಹಾಗೂ ಸಹಾಯಕಿಯರಿಗೆ ಶೇಕಡ 30 ರಷ್ಟು ಗೌರವಧನ ಹೆಚ್ಚಿಸಿರುತ್ತದೆ.

ರಾಜ್ಯದಲ್ಲಿ ತಾಳೆ ಬೆಳೆ ಅಭಿವೃದ್ಧಿ ಕುರಿತು

3012 - ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತಾಳೆ ಬೆಳೆಗಾರರ ಸಂಖ್ಯೆ ಎಷ್ಟು?

ಅ) ತಾಳೆಬೆಳೆಗಾರರ ರಕ್ಷಣೆಗೆ ತಮಿಳುನಾಡು ಮತ್ತು ಆಂಧ್ರ ರಾಜ್ಯಗಳು ತಂದಿರುವ "ತಾಳೆಬಳೆ" ಆಕ್ಟ್‌ನ್ನು ರಾಜ್ಯದಲ್ಲೂ ತರಲಾಗಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಜಾರಿಗೆ ತರಲಾಗುವುದು ಮತ್ತು ಇದರಿಂದ ರಾಜ್ಯಕ್ಕೆ ವಾರ್ಷಿಕ ಬರುವ ಆದಾಯ ಎಷ್ಟು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದ 8 ಜಿಲ್ಲೆಗಳಲ್ಲಿ 7714 ಹೆಕ್ಟೇರ್ ಪ್ರದೇಶದಲ್ಲಿ 6906 ಬೆಳಿಗಾರರು ತಾಳೆ ಬೆಳೆಯನ್ನು ಬೆಳೆಯುತ್ತಿದ್ದಾರೆ.

ಆ) ತಾಳೆ ಬೆಳೆಯುವ ರೈತರ ಹಿತ ಕಾಪಾಡುವ ದೃಷ್ಟಿಯಿಂದ ತಾಳೆ ಬಾಳೆ ಕಾಯಿದೆಯನ್ನು ಆಂಧ್ರ ಪ್ರದೇಶ ಮತ್ತು ತಮಿಳುನಾಡು ಮಾದರಿಯಲ್ಲೇ ಕರಡು ತಯಾರಿಸಿದ್ದು ಪ್ರಸ್ತುತ ಈ ಕಾಯಿದೆಯು ಪರಿಶೀಲನಾ ಹಂತದಲ್ಲಿದೆ.

ಇ) ತಾಳೆ ಬೆಳೆ ಕಾಯಿದೆಯ ಕರಡನ್ನು ತಯಾರಿಸಲಾಗಿದ್ದು ಇದರಿಂದ ರೈತರಿಗೆ ಆಗುವ ಪ್ರಯೋಜನ, ರೈತರ ಹಿತರಕ್ಷಣೆ, ಇತ್ಯಾದಿಗಳ ಬಗ್ಗೆ ಪರಿಶೀಲಿಸುತ್ತಿದೆ.

ತಾಳೆ ಬೆಳೆಯು ಒಂದು ಲಾಭದಾಯಕ ಬೆಳೆಯಾದ್ದರಿಂದ ರೈತರ ಆರ್ಥಿಕ ಮಟ್ಟವನ್ನು ಸುಧಾರಿಸುತ್ತದೆ. ಪ್ರತಿ ಹೆಕ್ಟೇರ್ ತಾಳೆ ಬೆಳೆಯಿಂದ ನೆಟ್ಟ ಏಳು ವರ್ಷದ ನಂತರ 20 ಟನ್ ತಾಳೆ ಹಣ್ಣಿನ ಇಳುವರಿಯಿಂದ ರೂ. 54,000-00ಗಳ ನಿವ್ವಳ ವಾರ್ಷಿಕ ಆದಾಯ ಪಡೆಯಬಹುದಾಗಿದೆ. ತಾಳೆ ಬಾಳೆ ಒಸ್ತರಣೆಯಿಂದ ರಾಜ್ಯದ ರೈತರ ಆರ್ಥಿಕ ಮಟ್ಟ ಸುಧಾರಿಸುವುದರ ಜೊತೆಗೆ ಗ್ರಾಮೀಣ ಪ್ರದೇಶದ ಜನರಿಗೆ ಸಾಕಷ್ಟು ಉದ್ಯೋಗ ದೊರಕಿಸಿ ಕೊಡುತ್ತದೆ. ಇದುವರೆಗೆ ರಾಜ್ಯದಲ್ಲಿ 7714 ಹೆಕ್ಟೇರ್ ಪ್ರದೇಶದಲ್ಲಿ ತಾಳೆ ಬೆಳೆಯನ್ನು ವಿಸ್ತರಿಸಲಾಗಿದೆ. ಈ ಪ್ರದೇಶವು ಪೂರ್ಣ ಉತ್ಪಾದನಾ ಹಂತಕ್ಕೆ ಬಂದ ನಂತರ ರಾಜ್ಯದ ರೈತರು ಒಟ್ಟಾರೆ 4165 ಲಕ್ಷ ರೂ. ಗಳ ನಿವ್ವಳ ಆದಾಯ ನಿರೀಕ್ಷಿಸಬಹುದಾಗಿರುತ್ತದೆ.

ಗದಗ ಬೆಟಗೇರಿ ನಗರದಲ್ಲಿ ವಸತಿ ಯೋಜನೆ ಕುರಿತು

3013 - ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಾವಾಗ ಗದಗ್ ಬೆಟಗೇರಿ ನಗರದಲ್ಲಿ ಸಾರ್ವಜನಕರಿಗೆ ಮನೆ ಕಟ್ಟಿಸಿ ಕೊಳ್ಳಲು ಕರ್ನಾಟಕ ಗೃಹ ಮಂಡಳಿ ನಿರ್ಣಯಿಸಿತು?

ಆ) ಸದರಿ ನಿರ್ಣಯವನ್ನು ಅನುಷ್ಠಾನಗೊಳಿಸಲು ಗೃಹ ಮಂಡಳಿ ಕೈಗೊಂಡ ಕ್ರಮಗಳೇನು?

ಇ) ನಿರ್ಣಯ ಅನುಷ್ಠಾನಗೊಳಿಸುವಲ್ಲಿ ವಿಳಂಬವಾದಾಗ ಆಗುವ ಬೆಲೆ ಏರಿಕೆಯಿಂದ ಮನೆ ಕಟ್ಟಿಸ ಬಯಸುವ ಜನರಿಗೆ ಹೆಚ್ಚಿನ ಹೊರೆ ಬೀಳುವುದಿಲ್ಲವೇ?